ಓ.ಎಸ್ ನಂ..48/2019 PW: 1

ದಿನಾಂಕಃ 23/07/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ 7 ರಿಂದ 9 ಮತ್ತು 11 ಪರ ಶ್ರೀ. ಎನ್.ಎಸ್ ವಕೀಲರಿಂದಃ**

2. ನನ್ನ ವಿವಾಹವಾಗಿ ಇಂದಿಗೆ 15 ವರ್ಷವಾಗಿದೆ. ಪ್ರತಿವಾದಿ 3 ರವರ ವಿವಾಹವಾಗಿ 25 ವರ್ಷವಾಗಿದೆ. ಪ್ರತಿವಾದಿ 4 ರವರ ವಿವಾಹವಾಗಿ 8 ವರ್ಷವಾಗಿದೆ. ಪ್ರತಿವಾದಿ 5 ರವರ ವಿವಾಹವಾಗಿಲ್ಲ. ನಾವೆಲ್ಲರೂ ನಮ್ಮ ತಂದೆ 1ನೇ ಪ್ರತಿವಾದಿಯರೊಂದಿಗೆ ಬೆಳೆದು ವಿಧ್ಯಾಭ್ಯಾಸ ಮಾಡಿದ್ದೇವೆ ಎಂದರೆ ಸರಿ. ನಮ್ಮ ತಂದೆಯೇ ನಮ್ಮನ್ನು ಸಂರಕ್ಷಣೆ ಮಾಡಿದ್ದರು ಮತ್ತು ವಿವಾಹ ಮಾಡಿದ್ದರು ಎಂದರೆ ಸರಿ. ನಮ್ಮ ತಂದೆ ಯಾವುದೇ ವ್ಯವಹಾರ ಮಾಡಿದ್ದರೂ ಕುಟುಂಬದ ಒಳ್ಳೆಯದಕ್ಕಾಗಿ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆಗೆ ವ್ಯವಸಾಯದಿಂದ ಬರುತ್ತಿದ್ದ ಆಧಾಯ ಹೊರತುಪಡಿಸಿ ಬೇರೆ ಆಧಾಯ ಇಲ್ಲ ಎಂದರೆ ಸರಿ. ನನ್ನ ತಂದೆಯೇ ನಮ್ಮ ಕುಟುಂಬದ ಮುಖ್ಯಸ್ಥರಾಗಿದ್ದರು ಎಂದರೆ ಸರಿ.

3. ದಾವಾ ಆಸ್ತಿಗಳು ನನ್ನ ತಂದೆಗೆ ಅವರ ಸಹೋದರರೊಂದಿಗೆ 1991 ರಲ್ಲಿ ಆದ ವಿಭಾಗದಲ್ಲಿ ಆಗಿದೆ. ವಿಭಾಗದಂತೆ ನನ್ನ ತಂದೆಯ ಹೆಸರಿಗೆ ಆಸ್ತಿಗಳ ಖಾತೆ ಬಂದಿವೆ ಎಂದರೆ ಸರಿ. ಅದರಂತೆ ನನ್ನ ತಂದೆ ಆಸ್ತಿಗಳ ಸ್ವಾಧೀನದಲ್ಲಿದ್ದು ವ್ಯವಸಾಯ ಮಾಡುತ್ತಿದ್ದರು ಎಂದರೆ ಸರಿ. ವ್ಯವಸಾಯದಿಂದ ಬರುತ್ತಿದ್ದ ಆಧಾಯ ಸಾಲದೇ ನಮ್ಮ ಮದುವೆಗಳಿಗೆ ಮತ್ತು ಕುಟುಂಬದ ಖರ್ಚುಗಳಿಗೆ ದಾವಾ ಆಸ್ತಿಗಳು ಮಾರಾಟ ಮಾಡುವ ಅವಶ್ಯಕತೆ ಇತ್ತು ಎನ್ನುವುದು ಸರಿಯಲ್ಲ, ನನ್ನ ತಾಯಿಯ ತಂದೆಯು ಹಣಕಾಸಿನ ಸಹಾಯ ಮಾಡುತ್ತಿದ್ದರು. ನನ್ನ ತಾಯಿಯ ತಂದೆಯು ಹಣಕಾಸಿನ ಸಹಾಯ ಮಾಡುತ್ತಿದ್ದ ಬಗ್ಗೆ ವಾದಪತ್ರದಲ್ಲಿ ಹೇಳಿಲ್ಲ ಮತ್ತು ದಾಖಲೆಗಳನ್ನು ಹಾಜರುಪಡಿಸಿಲ್ಲ.

4. ದಾವಾ ಅನಸೂಚಿ 1 ಆಸ್ತಿಯನ್ನು ನನ್ನ ತಂದೆಯು ಪ್ರತಿವಾದಿ 7 ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸುಳ್ಳು. ಪ್ರತಿವಾದಿ 7 ರವರು ಸದರಿ ಜಮೀನಿನ ಬಳಿ

ಬಂದು ಗಲಾಟೆ ಮಾಡಿದ್ದರಿಂದ ಈ ದಾವೆಯಲ್ಲಿ ಸೇರಿಸಲಾಗಿದೆ. ದಿನಾಂಕ 26.12.2018 ರಂದು ನಿಪಿ 20 ರಂತೆ ನನ್ನ ತಂದೆ ಮತ್ತು ತಾಯಿಯು ಈ ಆಸ್ತಿಯನ್ನು ಪ್ರತಿವಾದಿ 7 ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಕ್ರಯಪತ್ರದಂತೆ ಪ್ರತಿವಾದಿ 7 ರವರ ಹೆಸರಿಗೆ ಖಾತೆ ಬದಲಾವಣೆ ಆಗಿದೆ ಎಂದರೆ 2025 ರಲ್ಲಿ ಮಾಡಿಕೊಂಡಿದ್ದಾರೆ.

5. ದಿನಾಂಕ 09.01.2017 ರಂದು ನನ್ನ ತಂದೆಯು ದಾವಾ ಅನುಸೂಚಿ 3 ಆಸ್ತಿಯನ್ನು ಪ್ರತಿವಾದಿ 6 ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ 6 ರವರು ಈ ಆಸ್ತಿಗೆ ಕಾಂಪೌಂಡ್ ಹಾಕಲು ಬಂದಿದ್ದರಿಂದ ದಾವೆಯಲ್ಲಿ ಸೇರಿಸಲಾಗಿದೆ. ಈ ಆಸ್ತಿಯನ್ನು ಪ್ರತಿವಾದಿ 6 ರವರು ದಿನಾಂಕ 30.01.2019 ರಂದು ಪ್ರತಿವಾದಿ 8 ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಎರಡೂ ಕ್ರಯಪತ್ರಗಳ ಮೊದಲು ನನ್ನ ತಂದೆ ತಾಯಿಯು ಕ್ರಯ ಕರಾರುಪತ್ರಗಳನ್ನು ಮಾಡಿಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಕುಟುಂಬದ ಅವಶ್ಯಕತೆಗಳಿಗಾಗಿ ನನ್ನ ತಂದೆಯು ಸದರಿ ಕ್ರಯ ಕರಾರುಪತ್ರಗಳನ್ನು ಮತ್ತು ಕ್ರಯಪತ್ರಗಳನ್ನು ಮಾಡಿಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

6. ನನ್ನ ತಂದೆಯು ಬೇರೆ ಬೇರೆ ವಿಷಯಗಳಿಗೆ ಹಲವು ಸಿವಿಲ್ ಪ್ರಕರಣಗಳನ್ನು ದಾಖಲಿಸಿದ್ದರು ಎಂದರೆ ಸರಿ. ನನ್ನ ತಂದೆಯು ದಾವಾ ಆಸ್ತಿಗಳನ್ನು ಭೋಗ್ಯ ಸಹ ಮಾಡಿದ್ದರು ಎಂದರೆ ಸರಿ. ನನ್ನ ತಂದೆಯೇ ಆಸ್ತಿಗಳನ್ನು ಮಾರಾಟ ಮಾಡಿ ನನ್ನ ಮೂಲಕ ಈ ದಾವೆ ದಾಖಲಿಸಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಯು ಕುಟುಂಬದ ಅವಶ್ಯಕತೆಗಾಗಿ ಈ ಆಸ್ತಿಗಳನ್ನು ಮಾರಾಟ ಮಾಡಿರುವುದರಿಂದ ಸದರಿ ಕ್ರಯಪತ್ರಗಳು ಊರ್ಜಿತವಾಗುತ್ತವೆ ಎಂದರೆ ಸರಿಯಲ್ಲ. ನನ್ನ ತಂದೆಯು ದಾವಾ ಆಸ್ತಿಗಳ ಮೇಲೆ ಬ್ಯಾಂಕ್ ಸಾಲ ಪಡೆಯುವಾಗ ನಾನು ತಕರಾರು ಮಾಡಿರಲಿಲ್ಲ.

7. ದಿನಾಂಕ 06.09.2024 ರಂದು ಪ್ರ 2 ವಾದಿ 7 ರವರು ದಾವಾ ಅನುಸೂಚಿ 1 ಆಸ್ತಿಯನ್ನು ಪ್ರತಿವಾದಿ 7 ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 10 ರವರು ದಾಖಲಿಸಿರುವ ಓಎಸ್ 128/2014 ದಾವೆಯು ಇನ್ನೂ ಬಾಕಿ ಎಂದರೆ ಸರಿ. ನನ್ನ ತಂದೆ ತೀರಿಕೊಳ್ಳುವವರೆಗೂ ಅವರೊಂದಿಗೆ ಚೆನ್ನಾಗಿ ಇದ್ದೆನು ಎಂದರೆ ಅವರು ತೀರಿಕೊಳ್ಳುವ ಎರಡು ವರ್ಷಗಳ ಹಿಂದಿನವರೆಗೂ ಚೆನ್ನಾಗಿದ್ದೆನು. ನನ್ನ ತಂದೆ ಈಗ್ಗೆ 5 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಈ ದಾವೆ ದಾಖಲಿಸಲು ನನ್ನ ತಂದೆಯೇ ಕಾರಣ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಒಟ್ಟು ಕುಟುಬಂದ ಆಸ್ತಿಗಳು ಅಲ್ಲ ಮತ್ತು ನನ್ನ ತಂದೆಯು ದಾವಾ ಅನುಸೂಚಿ 1 ಮತ್ತು 3 ನ್ನು ಕುಟುಂಬದ ಅವಶ್ಯಕತೆಗಳಿಗಾಗಿ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ. ಈ ಆಸ್ತಿಗಳಲ್ಲಿ ನಮಗೆ ಭಾಗಾಂಶ ಇಲ್ಲದಿದ್ದರೂ ಸಹ ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ 10 ಪರ ವಕೀಲರು ಸಮಯಾವಕಾಶ ಕೋರಿದ್ದರಿಂದ ಅಂತಿಮವಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

(ಕೆ. ಎ. ನಾಗೇಶ)
**1** ನೇ ಅಪರ ಹಿರಿಯ ಸಿ.ಜೆ. ಮತ್ತು ಜೆಎಂಎಫ್‌ಸಿ
ಕೆಜಿಎಫ್